
ಸಿಡ್ನಿ ಶ್ರೀನಿವಾಸ್

# ಉಭಯಸಂಕಟ



ರವಿಶಂಕರ್ ಮತ್ತು ಪದ್ಮಾ ಅವರಿಗೆ ಎಲ್ಲಿಲ್ಲದ ಸಡಗರ. ಮಗಳು ಅನಿತಾ ಬರುತ್ತಿದ್ದಾಳೆ. ಸದ್ಯಕ್ಕೆ ಅಮೆರಿಕಾದಲ್ಲಿ ಪಿಎಚ್.ಡಿ. ಮಾಡುತ್ತಿರುವ ಅವಳು ಸಿಡ್ನಿಯಲ್ಲಿ ಜರಗುವ ಕಾನ್ಫರೆನ್ಸಿನಲ್ಲಿ ಭಾಗವಹಿಸುತ್ತಿದ್ದಾಳೆ. "ಬರುವ ಗುರುವಾರ ಬರುತ್ತಿದ್ದೇನೆ. ಮನೆಗೆ ಬಂದು ನಿಮ್ಮನ್ನು ನೋಡುತ್ತೇನೆ. ಜೊತೆಗೆ ಆಲ್ಬರ್ಟ್ ಇರುತ್ತಾನೆ. ಶುಕ್ರವಾರ ಪ್ರಾರಂಭವಾಗುವ ಮೂರು ದಿನದ ಕಾನ್ಫರೆನ್ಸಿನ ನಂತರ ನಾವು ಕಾರೊಂದನ್ನು ಬಾಡಿಗೆಗೆ ಕೊಂಡು ಆಸ್ಟ್ರೇಲಿಯಾದಲ್ಲೆಲ್ಲಾ ಒಂದು ತಿಂಗಳ ಕಾಲ ಓಡಾಡುತ್ತೇವೆ. ನಮ್ಮ ಪ್ರವಾಸ ಬೇಗ ಮುಗಿದರೆ ಖಂಡಿತಾ ಮತ್ತೆ ಮನೆಗೆ ಬರುತ್ತೇವೆ." ಎಂದು ಇ–ಮೇಲ್ ಕಳುಹಿಸಿದ್ದಾಳೆ. ಮಗಳು ಇನ್ನೂ ಅವಿವಾಹಿತೆ. ಅಮೆರಿಕಾದ ಬರ್ಕ್ಲಿಯಲ್ಲಿರುವ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಅವಳ ವ್ಯಾಸಂಗ. ಇದಕ್ಕೆ ಮೊದಲು ಅವಳು ಸಿಡ್ನಿ ವಿಶ್ವವಿದ್ಯಾಲಯದಲ್ಲಿ ಓದಿ ಬಯೋಕೆಮಿಸ್ಟ್ರಿಯಲ್ಲಿ ಪದವಿ ಗಳಿಸಿದ್ದಳು. ನಂತರ ವಿದ್ಯಾರ್ಥಿವೇತನ ಪಡೆದು ಬರ್ಕ್ಲಿಗೆ ಹೋಗಿದ್ದವಳು. ಅಲ್ಲಿ ಅವಳಿಗೆ ಆಲ್ಬರ್ಟನ ಪರಿಚಯವಾಯಿತು. ಅವನೂ ಇವಳಂತೆಯೇ ಪಿಎಚ್.ಡಿ. ವಿದ್ಯಾರ್ಥಿ.

ಆಲ್ಬರ್ಟನ ಬಗ್ಗೆ ತಂದೆ ತಾಯಿಯರು ಕೇಳಿದ್ದರು. ಹಿಂದಿನ ಒಂದೆರಡು ಇ–ಮೇಲ್‌ಗಳಲ್ಲಿ ಆವನ ಬಗ್ಗೆ ತಿಳಿಸಿದ್ದಳು. ಹೆಚ್ಚು ವಿವರಗಳನ್ನು ಕೊಟ್ಟಿರಲಿಲ್ಲ. ಪದ್ಮಾ ಅವರಿಗೆ ತಡೆಯಲಾರದ ಕುತೂಹಲ – "ಇನ್ನು ಮದುವೆ ತಾನೇ?" ಎಂದು ಕೇಳಿದ್ದರು. ಅದಕ್ಕೆ ಕುಪಿತಳಾದ ಅನಿತಾ "ಮಮ್ ನಿನಗೆ ತಲೆಯಲ್ಲಿ ಮತ್ತೇನೂ ಇಲ್ಲವಾ? ಮದುವೆಯೂ ಇಲ್ಲ, ಏನೂ ಇಲ್ಲ. ನಾವಿಬ್ಬರೂ ಸ್ನೇಹಿತರು ಅಷ್ಟೆ." ಎಂದು ತಾಯಿಯ ಮಾತಿಗೆ ಬ್ರೇಕ್ ಹಾಕಿದ್ದಳು. "ಅವನೇನು ಇವಳ ಜೊತೆ ಬರೋದು?" ಎಂಬ ಒಂದು ಭಾವನೆ ರವಿಶಂಕರ್ ಮತ್ತು ಪದ್ಮಾ ಅವರ ಮನಸ್ಸಿನಲ್ಲಿ ಹಾದುಹೋಯಿತು.

ರವಿಶಂಕರ್ ನುರಿತ ವೈದ್ಯರು. ಸಿಡ್ನಿಗೆ ನೂರು ಕಿಲೋಮೀಟರ್ ದೂರವಿರುವ ಮಿಟಗಾಂಗ್ ಎಂಬ ಹಳ್ಳಿಯಲ್ಲಿ ಅವರ ದವಾಖಾನೆ. ನಲವತ್ತು ವರ್ಷಗಳ ಹಿಂದೆಯೇ ಭಾರತದಿಂದ ವಲಸೆ ಬಂದ